ಕರ್ನಾಟಕ ವಿಧಾನಸಭೆ

ಬೆಳಗಾವಿ

ಮಂಗಳವಾರ 26ನೇ ಸೆಪ್ಟೆಂಬರ್ 2006ರಂದು

ಸದನವು ಬೆಳಗಾವಿಯ ಜವಹರಲಾಲ್ ನೆಹರು ವೈದ್ಯಕೀಯ

ವಿದ್ಯಾಲಯದ ಆವರಣದಲ್ಲಿರುವ ಡಾ: ಬಿ.ಎಸ್. ಜೇರಿಗೆ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆ 22 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

ವಿಷಯ: ಮಹಾರಾಷ್ಟ್ರದ ಉಪ ಮುಖ್ಯಮಂತ್ರಿಗಳು ಬೆಳಗಾವಿಗೆ ಭೇಟಿ ನೀಡಿ ಮಾಡಿದ ಭಾಷಣದ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಅಧ್ಯಕ್ಷರೇ, ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಪಾಟೀಲ್ ನೆನ್ನೆ ಕನ್ನಡದ ನೆಲ ಬೆಳಗಾವಿಗೆ ಬಂದು ಬಾಯಿಗೆ ಬಂದಂತೆ ಕರ್ನಾಟಕದ ವಿರುದ್ಧ ಮಾತನಾಡಿದ್ದಾರೆ. ಘೋಷಣೆ ಮಾಡಿದ್ದಾರೆ. ಇಲ್ಲಿ ಅವರಿಗೆ ಸಭೆ ನಡೆಸಲು ಅನುಮತಿ ಕೊಟ್ಟಿದ್ದು ಕರ್ನಾಟಕ ಸರ್ಕಾರದ್ದು ಅಪರಾಧ. ಎರಡನೇಯದಾಗಿ ಅವರು ನಮ್ಮ ನೆಲಕ್ಕೆ ಬಂದು ಮಾತನಾಡಿರುವುದು ಅತ್ಯಂತ ಘೋರ ಅನ್ಯಾಯ. ಕರ್ನಾಟಕದ ವಿರುದ್ಧ ಬೇರೆ ರಾಜ್ಯದವರೊಬ್ಬರು ಬಂದು ಮಾತನಾಡಿರುವುದು ಸರಿಯಲ್ಲ. ಕೂಡಲೇ ಸರ್ಕಾರ ನೆನ್ನೆ ಅವರನ್ನು ಬಂಧಿಸಬೇಕಾಗಿತ್ತು. ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ನಮ್ಮ ನೆಲಕ್ಕೆ ಬಂದು ಕನ್ನಡದ ವಿರುದ್ಧವಾಗಿ ಬೆಳಗಾವಿ ವಿರುದ್ಧವಾಗಿ ಮಾತನಾಡಿರುವ ಎಚಾರ ಏನಿದೆ, ಇದು ಕನ್ನಡ ನಾಡಿಗೆ ಮಾಡಿದ ದ್ರೋಹ. ಕರ್ನಾಟಕಕ್ಕೆ ಮಾಡಿದ ದ್ರೋಹ. ಕನ್ನಡಿಗರಿಗೆ ಮಾಡಿದ ಅಪರಾಧ. ಈ ಬಗ್ಗೆ ಕರ್ನಾಟಕ ಸರ್ಕಾರ ಏನು ಹೇಳುತ್ತದೆ? ಸರ್ಕಾರದ ಪರವಾಗಿ ಉತ್ತರ ಕೊಡುವವರು ಯಾರು? ಇಲ್ಲಿ ಮುಖ್ಯಮಂತ್ರಿಗಳಿಲ್ಲ, ಉಪ ಮುಖ್ಯಮಂತ್ರಿಗಳಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಇಲ್ಲಿ ಐವರು ಸಚಿವರಿದ್ದೇವೆ, ಯಾರೂ ಇಲ್ಲ ಅನ್ನಬೇಡಿ.

(ಅಡಚಣೆ)

(ಎಂ.ಇ.ಎಸ್. ನ ಮಾನ್ಯ ಶಾಸಕರಿಬ್ಬರು ಧರಣಿ ಬಾವಿಗೆ ಬಂದರು.)

ಅಧ್ಯಕ್ಷರು : ದಯಮಾಡಿ ಕೂರಬೇಕು.

(ಅಡಚಣೆ)

ಅಧ್ಯಕ್ಷರು : ಇದೇ ರೀತಿ ಮಾಡಿದರೆ ಎಲ್ಲರನ್ನೂ ಹೊರಗೆ ಹಾಕಿಸಬೇಕಾಗುತ್ತದೆ.

ಶ್ರೀ ಜೆ.ಎ. ಶ್ರೀರಾಮರೆಡ್ಡಿ : ಇಲ್ಲೇನು ನಡೆದಿದೆ, ನೀತಿ ನಿಯಮ ಇಲ್ಲವಾ ಸಭೆಗೆ?

ಶ್ರೀ ಆರಗ ಜ್ಞಾನೇಂದ್ರ : ಸಭೆ ನಿಯಮದ ಪ್ರಕಾರ ನಡೆಯಬೇಕು, ಎಲ್ಲೆಲ್ಲಿಗೋ ಸಭೆ ತೆಗೆದುಕೊಂಡು ಹೋಗುತ್ತಿದ್ದಾರೆ. ಏನಾದರೂ ಪ್ರಸ್ತಾಪಿಸಬೇಕಿದ್ದರೆ ನೋಟೀಸ್ ಕೊಡಬೇಕಾಗುತ್ತದೆ.

ಅಧ್ಯಕ್ಷರು : ಎಲ್ಲಾ ಸದಸ್ಯರೂ ಕೂತುಕೊಳ್ಳಬೇಕು, ನಿಂತಿರೋರು ಯಾಕೆ ಏನು ಅಂತ ಗೊತ್ತಾಗುವುದಿಲ್ಲ.

ಶ್ರೀ ಜಿ.ಎ. ಶ್ರೀರಾಮರೆಡ್ಡಿ : ಈ ರೀತಿ ಆದರೆ ಸದನಕ್ಕೆ ಗೌರವ ಬರುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್ ಪ್ರಸ್ತಾಪಿಸಿರುವ ವಿಚಾರದ ಬಗ್ಗೆ ಇಡೀ ಕರ್ನಾಟಕದ ಜನ ತುಂಬಾ ಸ್ಪಷ್ಟವಾಗಿದ್ದಾರೆ. ನೆನ್ನೆಯೇ ನಮ್ಮ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ಮಹಾರಾಷ್ಟ್ರದ ಉಪ ಮುಖ್ಯಮಂತ್ರಿಗಳು ಬೆಳಗಾವಿಗೆ ಬಂದು ಏನು ಮಾತನಾಡಿದ್ದಾರೆ ಅದರ ಬಗ್ಗೆ ಕಾನೂನಿನ ಪ್ರಕಾರವಾಗಿ ಕ್ರಮ ಜರುಗಿಸುತ್ತೇವೆ ಎಂದು ಸ್ಪಷ್ಟವಾದ ಹೇಳಿಕೆ ಕೊಟ್ಟಿದ್ದಾರೆ. ಕರ್ನಾಟಕದ ನೆಲಜಲದ ಬಗ್ಗೆ ಈ ಸರ್ಕಾರ ಯಾವುದೇ ಬೇರೆ ರಾಜ್ಯದ ವ್ಯಕ್ತಿ ದರ್ಪ ತೋರಿಸಲು ಬಿಡಬಾರದು. ಇಡೀ ಕರ್ನಾಟಕ ಸರ್ಕಾರ ಒಟ್ಟಿಗೇ ಇದೆ. ಇಡೀ ರಾಜ್ಯದ ಜನ ಬೆಳಗಾವಿ ಅಧಿವೇಶನ ನಡೆಸುತ್ತಿರುವುದಕ್ಕಾಗಿ ಈ ಸರ್ಕಾರಕ್ಕೆ "ಒಳ್ಳೆಯ ಕೆಲಸ ಮಾಡಿದಿರಿ" ಎಂದು ಹೇಳಿದ್ದಾರೆ. ಜೊತೆಗೆ ಎಲ್ಲಾ ಪಕ್ಷಗಳೂ ಒಟ್ಟಿಗೇ ಸೇರಿ ಇಡೀ ಸದನ ಒಟ್ಟಿಗೇ ಒಂದು ನಿರ್ಣಯ ತೆಗೆದುಕೊಂಡು ಕರ್ನಾಟಕದ ಗಡಿ ಭಾಗ, ಮಹಾಜನ್ ವರದಿ, ನೆಲಜಲದ ಬಗ್ಗೆ ಇಡೀ ರಾಜ್ಯ ಒಟ್ಟಾಗಿದ್ದೇವೆ ಎಂದು ನಿರ್ಣಯವನ್ನೂ ಮಾಡಿದ್ದೇವೆ. ಇದನ್ನು ವಾಟಾಳ್ ನಾಗರಾಜರೂ ಬೆಂಬಲಿಸುತ್ತಿದ್ದಾರೆ. ನೆನ್ನೆ ಅವರು ನನಗೆ ಮಾತನಾಡಲು ಅವಕಾಶ ಬೇಕು ಎಂದು ಕೇಳಿದ್ದು ಬಿಟ್ಟರೆ ಈ ನಿರ್ಣಯಕ್ಕೆ ಅವರದ್ದೂ ಒಪ್ಪಿಗೆ ಇದೆ. ಹೀಗಾಗಿ ರಾಜ್ಯ ಸರ್ಕಾರ ತುಂಬ ಸ್ಪಷ್ಟವಾಗಿದೆ. ಈ ನೆಲ ಜಲದ ಬಗ್ಗೆ ಯಾವುದೇ ವ್ಯಕ್ತಿ, ಅವನು ಯಾವುದೇ ರಾಜ್ಯದವನಿರಬಹುದು ಯಾವುದೇ ಪಕ್ಷದವನಿರಬಹುದು, ಈ ರಾಜ್ಯದ ಮಣ್ಣಿನ ಬಗ್ಗೆ ಅಪವಾದದ ಮಾತನಾಡಿದಾಗ ಅದನ್ನು ಖಂಡನೆ ಮಾಡುತ್ತೇವೆ. ಅದರ ವಿರುದ್ಧವಾಗಿ ನಾವು ಕ್ರಮವನ್ನು ಕೈಗೊಳ್ಳುತ್ತೇವೆಂಬ ಮಾತನ್ನು ತುಂಬ ಸ್ಪಷ್ಟವಾಗಿ ಈ ಸರ್ಕಾರದ ಪರ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು : ಆಯಿತು.

ಶ್ರೀ ಜಿ.ಎ. ಶ್ರೀರಾಮರೆಡ್ಡಿ : ನಿನ್ನೆ ನಾವು ನೀಡಿರುವ ಹಕ್ಕುಚ್ಯುತಿ ನಿರ್ಣಯ ಹಾಗೇ ಇದೆ.

ಶ್ರೀ ಹೆಚ್. ಆಂಜನೇಯ : ಈ ಅಧಿವೇಶನ ಆಗುವವರೆಗೂ MES ನವರನ್ನು suspend ಮಾಡಬೇಕು ಅವರು ಮಾತನಾಡುವುದಾದರೆ ಇಲ್ಲಿ ಬಂದು ಕನ್ನಡದಲ್ಲೇ ಮಾತನಾಡಬೇಕು. ಅದಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಶ್ರೀರಾಮರೆಡ್ಡಿಯವರೇ, ನಿಮ್ಮ privilege motion ನೋಡುತ್ತಿದ್ದೇನೆ. ಅದಕ್ಕೆ ರೂಲಿಂಗ್ ಕಾದಿರಿಸಿದ್ದೇನೆ.

ಶ್ರೀ ಜಿ.ಎ. ಶ್ರೀರಾಮರೆಡ್ಡಿ : ನಾವು ಪ್ರಸ್ತಾಪ ಮಾಡಿದ ಮೇಲೇನೆ ನೀವು ruling ಕೊಡುವುದು, ಹಾಗೆಯೇ ಹೇಗೆ ruling ಕೊಡಲು ಬರುತ್ತದೆ?

ಅಧ್ಯಕ್ಷರು : ನೀವು ಕಳಿಸಿರುವ motionನ್ನು ಪರಿಶೀಲನೆ ಮಾಡುತ್ತಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಮಗೆ ತಲಾ ಒಂದೊಂದು minute ಪ್ರಸ್ತಾಪ ಮಾಡಲು ಅವಕಾಶ ಕೊಟ್ಟು ಆಮೇಲೆ ನಿಮ್ಮ ruling ಕೊಡಿ.

11.30 A.M.

ಶ್ರೀ ವಾಟಾಳ್ ನಾಗರಾಜ್ : ಒಂದೊಂದು ನಿಮಿಷ ಪ್ರಸ್ತಾಪಮಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಒಂದೊಂದು ನಿಮಿಷ ಆದರೂ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಎಸ್. ರಾಜೇಂದ್ರನ್ : ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ. ಆಮೇಲೆ ತಾವು ರೂಲಿಂಗ್ ಕೊಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ. ನೀವು ಏನಾದರೂ ರೂಲಿಂಗ್ ಕೊಡಿ. ನೀವು ಏನು ಕೊಟ್ಟರು ನಾವು ಒಪ್ಪಿಕೊಳ್ಳುತ್ತೇವೆ.

ಅಧ್ಯಕ್ಷರು : ನಂತರ ಅವಕಾಶ ಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ತೀರ್ಪಿನ ಮೇಲೆ ಹೋಗುವುದಕ್ಕೆ ಬರುವುದಿಲ್ಲ. Adjournment motion, privilege motion ಗೆ ತಾವು ತೀರ್ಮಾನ ಕೊಟ್ಟು ನಂತರ business ನಡೆಸಬೇಕು.

ಅಧ್ಯಕ್ಷರು : ಆಯಿತು. ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಮೊದಲು ಹಕ್ಕುಚ್ಯುತಿ ತೆಗೆದುಕೊಳ್ಳಿ.

ಅಧ್ಯಕ್ಷರು : ಆಯಿತು ಅವಕಾಶ ಕೊಡುತ್ತೇನೆ ಕುಳಿತುಕೊಳ್ಳಿ.

(ಆ) ವಿಷಯ: ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾದ ಶ್ರೀ ಹೆಚ್.ಕೆ. ಪಾಟೀಲರು ರಾಜ್ಯಪಾಲರಿಗೆ ಬರೆದಿರುವ ಪತ್ರದ ಬಗ್ಗೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಹೆಚ್.ಕೆ. ಪಾಟೀಲ್‌ರವರು ರಾಜ್ಯದ ರಾಜ್ಯಪಾಲರಿಗೆ ಒಂದು ಪತ್ರವನ್ನು ಬರೆದಿದ್ದಾರೆ.

(ಅಡಚಣೆ)

ಶ್ರೀ ಎನ್. ಧರ್ಮಸಿಂಗ್: ಶ್ರೀಮಾನ್ ಹೆಚ್.ಕೆ. ಪಾಟೀಲ್‌ರವರು ರಾಜ್ಯಪಾಲರಿಗೆ ಕರ್ನಾಟಕದಲ್ಲಿ ಇರತಕ್ಕಂಥ ವಿಶೇಷವಾಗಿ ಇರುವ ರಾಜಕೀಯ ಪರಿಸ್ಥಿತಿ ಬಗ್ಗೆ, ಅದು ಲಂಚನ ಹಗರಣದ ಬಗ್ಗೆ ಇರಬಹುದು, Law and Order ಬಗ್ಗೆ ಇರಬಹುದು, ಬಹಳಷ್ಟು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿ ರಾಜ್ಯಪಾಲರಿಗೆ ಪತ್ರವನ್ನು ಬರೆದಿದ್ದಾರೆ. ರಾಜ್ಯಪಾಲರೂ ಕೂಡ ಅವರಿಗೆ ಉತ್ತರವನ್ನು ಕೊಟ್ಟಿದ್ದಾರೆ. ತಾವು ಯಾವ ಯಾವ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ? ಇದಕ್ಕೆ ನನ್ನ concern ಇದೆ. ಅದರ ಬಗ್ಗೆ ಚಿಂತನೆ ಮಾಡುತ್ತಿದ್ದೇನೆ ಎನ್ನತಕ್ಕ ಮಾತನ್ನೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಎರಡೂ ಪತ್ರಗಳನ್ನೂ ತಮಗೆ ಕಳಿಸಿಕೊಡುತ್ತೇನೆ. ಇವತ್ತು ನಾವು ವಿರೋಧ ಪಕ್ಷದಲ್ಲಿ ಇದ್ದು ನಾಡಿದ್ದು ಮಾನ್ಯ ರಾಜ್ಯಪಾಲರು ಕೂಡ ಈ ಸದನಕ್ಕೆ ಬಂದು ಸದನವನ್ನು ಉದ್ದೇಶಿಸಿ ಮಾತನಾಡುತ್ತಿದ್ದಾರೆ. ಯಾವ ರೀತಿಯಾಗಿ ತಮ್ಮ ಕಾಲದಲ್ಲಿ ಘನತೆವೆತ್ತ ರಾಷ್ಟ್ರಪತಿಗಳು ಕೂಡ ಬಂದು ಈ ಒಂದು ಸಂಸತ್ ಸದಸ್ಯರಿಗೆ, ವಿಧಾನ ಸಭಾ ಸದಸ್ಯರಿಗೆ ಏನೊಂದು ಹಿತೋಪದೇಶ